ಅನುಕೂಲವಾಗುವಂತೆ ಅಂತರ್ಜಲ ಹೆಚ್ಚಿಸಲು ಇಂಗುಕೆರೆ ನಿರ್ಮಾಣವನ್ನು ಸಹ ಕೈಗೊಳ್ಳುತ್ತಿದೆ ಸಣ್ಣ ನೀರಾವರಿ ಇಲಾಖೆಯು ವಿವಿಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಪ್ರತಿ ವರ್ಷ ಆಯವ್ಯಯದಲ್ಲಿ ಲಭ್ಯವಾಗುವ ಅನುದಾನದಿಂದ ಕೈಗೊಳ್ಳುತ್ತಿದೆ

1) ನೀರಾವರಿ ಸಾಮರ್ಥ್ಯವನ್ನು ಕಲ್ಪಿಸುವ ಕಾಮಗಾರಿಗಳು
   (ಅ) ಹೊಸಕೆರೆ ನಿರ್ಮಾಣ, ಇಂಗುಕೆರೆ ನಿರ್ಮಾಣ
   (ಅ) ಏತ ನೀರಾವರಿ ಯೋಜನೆಗಳು
   (ಇ) ಅಣೆಕಟ್ಟುಗಳು ಮತ್ತು ಪಿಕಪ್‌ಗಳ ನಿರ್ಮಾಣ
2) ಅಚ್ಚುಕಟ್ಟನ್ನು ಸ್ಥಿರಗೊಳಿಸುವ ಕಾಮಗಾರಿಗಳು
   (ಅ) ಆಧುನೀಕರಣ ಕಾಮಗಾರಿಗಳು
   (ಆ) ಹಳೆಯ ಮತ್ತು ಒಡೆದ ಕೆರೆಗಳ ಜೀರ್ಣೋದ್ಧಾರ ಮತ್ತು ಹೂಳೆತ್ತುವುದು

ಸಣ್ಣ ನೀರಾರಿ ಇಲಾಖೆಯಲ್ಲಿ ಇಂಗುಕೆರೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಯಾಗುವುದು

ಆ) ಮೇಲೆ ತಿಳಿಸಿದಂತೆ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವುದರಿಂದ, ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಗೆ ಸಹಾಯಕವಾಗುವುದು

ಅಂತರ್ಜಲದ ಯಧೇಚ್ಚವಾದ ಬಳಕೆಯನ್ನು ನಿಯಂತ್ರಿಸುವ ದೃಷ್ಟಿಯಿಂದ "ಕರ್ನಾಟಕ ಅಂತರ್ಜಲ (ಅಬಿವೃದ್ಧಿ ಮತ್ತು ನಿರ್ವಹಣೆಯ ವಿನಿಮಯ ಮತ್ತು ನಿಯಂತ್ರಣ) ವಿದೇಯಕ 2005" ರೂಪಿಸಿದ್ದು, ವಿಧೇಯಕವು ಪರಿಶೀಲನೆಯಲ್ಲಿದೆ ಈ ವಿಧೇಯಕವನ್ನು ಜಾರಿಗೊಳಿಸಿದಲ್ಲಿ ಅಂತರ್ಜಲ ಮಿತಬಳಕೆಯಿಂದಾಗಿ ಅಂರ್ತಜಲ ಅಭಿವೃದ್ಧಿಗೆ ಸಹಾಯಕವಾಗುವುದು

801 (994) ಶ್ರೀ ಶಿವಶಂಕರ್ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಿಂದಿನ ಸರ್ಕಾರ ನಿಲ್ಲಿಸಿದ್ದ ಫ್ಲೇವಿನ್ ಲಾಟರಿಯನ್ನು ಮರು ಪ್ರಾರಂಭಿಸಿದ ಉದ್ದೇಶವೇನು ,

ಆ) ಇದನ್ನು ಹಾಗೂ ಒಂದಂಕಿ ಲಾಟರಿಯನ್ನು ನಿಲ್ಲಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ದಿನಾಂಕ 24 07 2004ರಲ್ಲಿ ರಾಜ್ಯ ಸರ್ಕಾರವು ಆನ್‌ಲೈನ್ ಲಾಟರಿಯನ್ನು ನಿಷೇಧಿಸಿತು ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ

P2
36

02 06 2006ರ ತೀರ್ಪಿನಲ್ಲಿ ಮೇಲ್ಕಂಡ ಆದೇಶವನ್ನು ಅನುರ್ಜಿತಗೊಳಿಸಿ ಹಿನ್ನೆಲೆಯಲ್ಲಿ ಕೇವಲ ಆನ್‌ಲೈನ್ ಲಾಟರಿಯನ್ನು ರಾಜ್ಯದಲ್ಲಿ ನಿಷೇಧಿಸಲು ಅವಕಾಶವಿಲ್ಲ ಆದ್ದರಿಂದ ರಾಜ್ಯದಲ್ಲಿ ಲಾಟರಿಯನ್ನು ನಿಷೇಧಿಸಲು ಉದ್ದೇಶಿಸಿದ್ದಲ್ಲಿ ಪೇಪರ್ ಹಾಗೂ ಆನ್‌ಲೈನ್ ಲಾಟರಿ ಎರಡನ್ನೂ ನಿಷೇಧಿಸಬೇಕೆಂದು ಆದೇಶಿಸಿದೆ ಸಧ್ಯ ರಾಜ್ಯದಲ್ಲಿ ಲಾಟರಿಯನ್ನು ಸಂಪೂರ್ಣವಾಗಿ ನಿಷೇಧಿಸಿಲ್ಲವಾದ್ದರಿಂದ ಕರ್ನಾಟಕ ರಾಜ್ಯದಲ್ಲಿ ಹೊರ ರಾಜ್ಯಗಳು ಫ್ಲೇವಿನ್ ಲಾಟರಿಯನ್ನು ಮರು ಪ್ರಾರಂಭಿಸಿರುತ್ತವೆ

ಆ) ಹೌದು ಆದರೆ, ಕರ್ನಾಟಕ ರಾಜ್ಯವು ತನ್ನ ಲಾಟರಿಗಳನ್ನು ನಡೆಸುತ್ತಿರುವುದರಿಂದ ಹೊರ ರಾಜ್ಯಗಳ ಫ್ಲೇವಿನ್ ಲಾಟರಿಯನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ ಕೇಂದ್ರ ಸರ್ಕಾರದ ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಒಂದಂಕಿ ಲಾಟರಿಯನ್ನು ರಾಷ್ಟ್ರಾದ್ಯಂತ ನಿಷೇಧಿಸಿದ್ದು, ರಾಜ್ಯ ಸರ್ಕಾರವೂ ಸಹ ಒಂದಂಕಿ ಲಾಟರಿಯನ್ನು ನಿಷೇಧಿಸಿರುತ್ತದೆ

802 (995) ಶ್ರೀ ಶಿವಶಂಕರರೆಡ್ಡಿ ಎನ್ ಹೆಚ್ ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಣ್ಣ ಮತ್ತು ಅತೀ ಸಣ್ಣ ರೈತರಿಗೆ ವ್ಯವಸಾಯದಲ್ಲಿ ಜೈವಿಕ ತಂತ್ರಜ್ಞಾನ ಅಳವಡಿಸುವ ಬಗ್ಗೆ ತರಬೇತಿ ನೀಡುವ ಹಾಗೂ ಆರ್ಥಿಕ ಸಹಾಯ ನೀಡುವ ಯೋಜನೆ ಸರ್ಕಾರಕ್ಕೆ ಇದೆಯೇ ,

ಆ) ಹಾಗಿದ್ದಲ್ಲಿ, ರೈತರಿಗೆ ಇದನ್ನು ಯಾವಾಗ ಹಾಗೂ ಯಾವ ರೀತಿಯಲ್ಲಿ ನೀಡಲಾಗುವುದು ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

803 (997) ಶ್ರೀ ಶಿವಶಂಕರತ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹೋಬಳಿಯ ಮಟ್ಟದಲ್ಲಿ ಕಂದಾಯ ದಾಖಲೆಗಳ ಗಣಕೀಕರಣ ಇನ್ನೂ ಕಾರ್ಯಗತವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಗಣಕೀಕರಣ ಜಾರಿಯಾಗಿದ್ದಲ್ಲಿ, ಎಲ್ಲೆಲ್ಲಿ ಕಂದಾಯ ದಾಖಲೆಗಳು ಗಣಕೀಕರಣವಾಗಿದೆ , (ಜಿಲ್ಲಾವರು ಹಾಗೂ ತಾಲ್ಲೂಕುವಾರು ವಿವರ ನೀಡುವುದು) ,

ಇ) ಪಹಣಿಗಳ ಜೊತೆಗೆ ಜನನ ಮರಣ ಪ್ರಮಾಣ ಪತ್ರ, ಜಾತಿಯ ಪ್ರಮಾಣ ಪತ್ರ ಮತ್ತು ವಾರಸುದಾರರ ದೃಢೀಕರಣ ಪತ್ರಗಳನ್ನು ಗಣಕೀಕೃತಗೊಳಿಸಲು ಸಾಧ್ಯವಾಗುವುದಿಲ್ಲವೆ ?